**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 34/2025** ಪಿ.ಡಬ್ಲ್ಯೂ 9

ಸಿ.ಡಬ್ಲ್ಯೂ.11

| | |
|---|---|
| ಸಾಕ್ಷಿದಾರರ ಹೆಸರು | ಸುಷ್ಮಾ |
| ತಂದೆಯ ಹೆಸರು | ವಿಠಲ ಶೆಟ್ಟಿಗಾರ |
| ವಯಸ್ಸು | 44 ವರ್ಷ |
| ಉದ್ಯೋಗ | ಮಹಿಳಾ ಹೆಚ್ ಸಿ 166, ಮಹಿಳಾ ಠಾಣೆ ಉಡುಪಿ |
| ವಿಳಾಸ | ಉಡುಪಿ |

ದಿನಾಂಕಃ 13-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು 2019 ರಿಂದ ಜೂನ್-2025 ರವರೆಗೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಮಹಿಳಾ ಮುಖ್ಯ ಪೊಲೀಸ್ ಪೇದೆಯಾಗಿ ಸೇವೆ ಸಲ್ಲಿಸಿದ್ದೇನೆ.

2) ದಿನಾಂಕ 23-03-2025 ರಂದು ನಿಪಿ-8 ರ ಸಮಯದಲ್ಲಿ ನಿಪಿ-9 ರ ಪೋಟೋವನ್ನು ನಾನು ತೆಗೆದಿದ್ದೆ. ಮತ್ತು ನಿಪಿ-8 ರ ಪಂಚನಾಮೆಗೆ ದಸ್ತೂರ್ ಳಾಗಿದ್ದು, ಆ ಸಹಿಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-8(ಸಿ) ಎಂದು ಗುರುತಿಸಿದ್ದೇನೆ.

3) ತಾರೀಕು 24-03-2025 ರಂದು ಆರೋಪಿಯ ದಸ್ತಗಿರಿ ಸಮಯದಲ್ಲಿ ನಿಪಿ-2 ರ ಪಂಚನಾಮೆಯನ್ನು ಚಾಸಾ-14 ಹೇಳಿದಂತೆ ನಾನೇ ದಾಖಲಿಸಿದ್ದೆ. ಅದಕ್ಕಾಗಿ ಮಾಡಿದ ಸಹಿಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-2(ಬಿ) ಎಂದು ಗುರುತಿಸಿದ್ದೇನೆ. ಅದೇ ದಿನ ಆರೋಪಿ ಮತ್ತು ಚಾಸಾ-14 ಇವರೊಂದಿಗೆ ಹೋಗಿ ನಿಪಿ-3 ರ ಪಂಚನಾಮೆ ದಾಖಲಿಸಿದ್ದೆ , ಆಗ ನಿಪಿ-4 ರ ಪೋಟೋವನ್ನು ನಾನೇ ತೆಗೆದಿದ್ದೆ. ನಿಪಿ-3 ರಲ್ಲಿರುವ ನನ್ನ ಸಹಿ ನಿಶಾನೆ ಪಿ-3(ಬಿ) ಎಂದು ಗುರುತಿಸಿದೆ. ಅದೇ

ದಿನ ಸಂಜೆ ಠಾಣೆಯಲ್ಲಿ ಚಾಸಾ-14 ಹೇಳಿದ ನಿಪಿ-5 ರ ಪಂಚನಾಮೆಯನ್ನು ಬರೆದಾಗ ಹಾಜರುಪಡಿಸಿದ ಮುದ್ದೆಮಾಲುಗಳ ಪೋಟೋಗಳನ್ನು ಸಹ ನಾನೇ ತೆಗೆದಿದ್ದೆ. ಆದಿನ ಹಾಜರುಪಡಿಸಿದ ಆರೋಪಿತನ ಬಳಿಯಲ್ಲಿ ಇತ್ತು ಎಂಬ ಚಾಕುವಿನ ಪೋಟೋವನ್ನು ನಾನೇ ತೆಗೆದಿದ್ದು, ಅದನ್ನು ಈಗ ನೋಡಿ ಅದನ್ನು **ನಿಶಾನೆ ಪಿ-18** ಎಂದು ಗುರುತಿಸಿದ್ದೇನೆ. ನಿಪಿ-5 ರಲ್ಲಿರುವ ನನ್ನ ಸಹಿ ನಿಶಾನೆ ಪಿ-5(ಬಿ) ಎಂದು ಗುರುತಿಸಿದೆ. ಚಾಸಾ-1 ಈತನ ಬಟ್ಟೆಗಳ ಪೋಟೋ ನಿಪಿ-7 ಆಗಿದೆ. ಆ ಪೋಟೋಗಳನ್ನು ತೆಗೆದಿದ್ದ ನನ್ನ ಮೊಬೈಲ್ ವೀವೋ ವೈ-27 ನ್ನು ಠಾಣೆಯ ಗಣಕೀಕರಣ ವ್ಯವಸ್ಥೆಗೆ ಸಂಪರ್ಕಿಸಿ, ಪೋಟೋಗಳ ಹ್ಯಾಷ್ ವ್ಯಾಲ್ಯುವನ್ನು ಕಂಡುಕೊಂಡು ದಾಖಲಿಸಿದ್ದೆ. ಆ ಪೋಟೋಗಳನ್ನು ಹೊರಗೆ ಪ್ರಿಂಟ್ ತೆಗೆದಿತ್ತು. ಅದಕ್ಕಾಗಿ ಕೊಟ್ಟ ಪ್ರಮಾಣ ಪತ್ರವನ್ನು ಈಗ ನೋಡಿ ಅದನ್ನು **ನಿಶಾನೆ ಪಿ-19** ಎಂದು ಗುರುತಿಸಿದೆ. ಅದರಲ್ಲಿರುವ ನನ್ನ ಸಹಿ ನಿಶಾನೆ ಪಿ-19(ಎ) ಎಂದು ಗುರುತಿಸಿದೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್.ಪಿ. (ಎಲ್.ಎ.ಡಿ.ಸಿ) ವಕೀಲರಿಂದ</u>**

1) ನಾನು ಗುರುತಿಸಿದ ಪೋಟೋಗಳನ್ನು ಪ್ರಿಂಟ್ ತೆಗೆದಿದ್ದು ರಚನಾ ಪ್ಯಾನ್ಸಿ ಸ್ಟುಡಿಯೋದಲ್ಲಿ. ಆ ಪೋಟೋಗಳನ್ನು ಸ್ಟುಡಿಯೋದವರಿಗೆ ವಾಟ್ಸಾಪ್ ಮೂಲಕ ಕಳುಹಿಸಿದ್ದೆ. ಅವರು ಸ್ಟುಡಿಯೋ ಗಣಕೀಕರಣ ವ್ಯವಸ್ಥೆಯ ಮೂಲಕ ಪ್ರಿಂಟ್ ತೆಗೆದಿದ್ದರು. ಆ ಸ್ಟುಡಿಯೋದವರಿಂದ ಸಾಕ್ಷ್ಯ ಅಧಿನಿಯಮದ ಪ್ರಮಾಣ ಪತ್ರ ಪಡೆಯಬೇಕಾಗಿತ್ತು ಎಂದರೆ ಸರಿಯಿಲ್ಲ.

2) ನಮ್ಮ ಠಾಣೆಯ ಠಾಣಾಧಿಕಾರಿ ಇನ್ಸಪೆಕ್ಟರ್ ರವರು. ನಮ್ಮ ಠಾಣೆಯ ಎಲ್ಲಾ ಮುದ್ದೆಮಾಲುಗಳ ನಿಯಂತ್ರಣಾಧಿಕಾರಿ ಅವರೇ ಇರುತ್ತಾರೆ. ಗಣಕೀಕೃತ ವ್ಯವಸ್ಥೆ ಕೂಡಾ ಅವರ ಸುಪರ್ದಿ. ನಮ್ಮ ಠಾಣೆಯಲ್ಲಿ ಕಂಪ್ಯೂಟರ್ ಆಪರೇಟರ್ ಹುದ್ದೆಯಲ್ಲಿ ಸೇವೆ ಸಲ್ಲಿಸುವವರು ಇದ್ದಾರೆ. ನಮ್ಮ ಠಾಣೆಯ ಕಂಪ್ಯೂಟರ್ ಗಳ ಯಾವುದೇ ದತ್ತಾಂಶವನ್ನು ಕಂಪ್ಯೂಟರ್ ಆಪರೇಟರ್ ಗಳಿಂದ ಪಡೆಯುತ್ತಾರೆ. ನಾನು ನಿಪಿ-4, 9, ರ ಪೋಟೋಗಳಲ್ಲಿ ನಾನು ಇದ್ದೇನೆ. ನಿಪಿ-19 ನ್ನು ನೀಡಿದ ದಿನಾಂಕ ನಮೂದಿಸಿಲ್ಲ ಎಂದರೆ ನಿಜ. ನಿಪಿ-19 ರಲ್ಲಿ ಹೇಳಿದ ಹ್ಯಾಷ್

ವ್ಯಾಲ್ಯು ಯಾವ ದಾಖಲೆಯದ್ದು ಎಂದು ಕಂಡುಬರುವುದಿಲ್ಲ ಎಂದರೆ, ನಿರ್ದಿಷ್ಟ ನಮೂನೆಯಲ್ಲಿಯ ವಿವರಗಳನ್ನು ಮಾತ್ರವೇ ನಾನು ದಾಖಲಿಸಿದ್ದೇನೆ. ನಿಪಿ-19 ರಲ್ಲಿ ಹೇಳಿದ ಹ್ಯಾಷ್ ವ್ಯಾಲ್ಯು ಯಾವ ದಾಖಲೆಗಳಿಗೆ ಸಂಬಂಧಪಟ್ಟಿತ್ತು ಎಂದು ನಿಪಿ-19 ರಲ್ಲಿ ಕಂಡುಬರುವುದಿಲ್ಲ ಎಂದರೆ ಸರಿಯಲ್ಲ.

3) ನಾನು ಹೇಳಿದಂತೆ ನಿಶಾನೆ ಪಿ-2,3, 5, 8, ನೇದರ ಮಹಜರುಗಳಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ- 4, 7, 9, 18 ರ ಫೋಟೋಗಳನ್ನು ನಾನು ತೆಗೆದಿಲ್ಲ ಎಂದರೆ, ನನ್ನ ಮೊಬೈಲ್ ನಲ್ಲಿ ತೆಗೆದಿತ್ತು. ತನಿಖೆಯಲ್ಲಿ ಬಳಸಲೆಂದು ನಮ್ಮ ಠಾಣೆಯಲ್ಲಿಯೂ ಸಹ ಕ್ಯಾಮರಾವನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಪಿ-2,3,5,8 ರ ಪಂಚನಾಮೆಗಳಿಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಪಂಚನಾಮೆಗಳನ್ನು ಅದರಲ್ಲಿ ಹೇಳಿದ ಜಾಗೆಯಲ್ಲಿ ನಾನು ಬರೆದಿಲ್ಲ ಎಂದರೆ ಸರಿಯಲ್ಲ.

4) ಆರೋಪಿಯ ದಸ್ತಗಿರಿಯ ಸಮಯದಲ್ಲಿ ಆತನ ಅಂಗ ಶೋಧನೆ ಮಾಡಿರುತ್ತೇವೆ. ಆಗ ಆತನ ಬಳಿಯಲ್ಲಿ ಯಾವುದೇ ಸ್ವತ್ತು ಸಿಕ್ಕಿಲ್ಲ. ನಾನು ಈ ಗುನ್ನೆಯ ತನಿಖೆಯಲ್ಲಿ, ತನಿಖಾಧಿಕಾರಿಗೆ ಸಹಾಯಕಳಾಗಿ ಸೇವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯ ಸೂಚನೆ ಮೇರೆಗೆ ದಾಖಲೆಗಳನ್ನು ಸೃಷ್ಟಿಸಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.

**ಪಿ.ಡಬ್ಲ್ಯೂ.9/ಸಿ.ಡಬ್ಲ್ಯೂ.11**